# ಬಿ. ವ್ಹಿ. ವ್ಹಿ. ಸಂಘದ
# ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ, ಬಾಗಲಕೋಟ
# ಕನ್ನಡ ವಿಭಾಗ

ಶತಮಾನದ ಇತಿಹಾಸ ಪಡೆದಿರುವ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ, ಅಂಗ ಸಂಸ್ಥೆಯಾದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯವು, ೧೯೫೪ರಲ್ಲಿ ಕಲಾ ಹಾಗೂ ವಿಜ್ಞಾನ ವಿಭಾಗಗಳೊಂದಿಗೆ ಸ್ಥಾಪನೆಯಾಯಿತು. ನಾಡಿನ ಇತಿಹಾಸದಲ್ಲಿಯೇ ಅದೊಂದು ಅವಿಸ್ಮರಣೀಯವಾದ ಮನ್ವಂತರದ ಕಾಲಘಟ್ಟವೇ ಸರಿ. ಕಲೆಯೊಂದಿಗೆ ಸಂಯೋಜನೆ ಗೊಂಡಿದ್ದ ವಿಜ್ಞಾನ ವಿಭಾಗವು ಮುಂದೆ ೧೯೬೦ರಲ್ಲಿ ಸ್ವತಂತ್ರ ಕಟ್ಟಡವನ್ನುಹೊಂದಿ ಅಸ್ತಿತ್ವ ಪಡೆಯಿತು. ಬಾಗಲಕೋಟ ಮತ್ತು ವಿಜಯಪೂರ ಜಿಲ್ಲೆಗಳಲ್ಲಿಯೇ ವಿಜ್ಞಾನವನ್ನೇ ಬೋಧಿಸುವ ಏಕೈಕ ಪ್ರತಿಷ್ಠಿತ ಮಹಾವಿದ್ಯಾಲಯ ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಯಿತು. ಇಂದಿಗೆ ಎಪ್ಪತ್ತೈದು ವಸಂತಗಳನ್ನು ಪೂರೈಸಿದ ಮಹಾವಿದ್ಯಾಲಯ ತನ್ನ ವಜ್ರಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ನಮ್ಮ ಅಭಿಮಾನ ಹೆಮ್ಮೆಯ ಸಂಗತಿ.

ಅಂತಹ ಮಹಾವಿದ್ಯಾಲಯದ ಕನ್ನಡ ವಿಭಾಗವು, ನಮ್ಮ ನಾಡಿನ ಅನೇಕ ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನದಲ್ಲಿ ಬೆಳೆದು ಬಂದಿರುವಂತಹದ್ದು.

ನಾಡಿನ ಹೆಸರಾಂತ ಸಂಶೋಧಕರು ಹಾಗೂ ನಮ್ಮ ಮಹಾವಿದ್ಯಾಲಯದ ಸಂಸ್ಥಾಪಕ ಪ್ರಾಚಾರ್ಯರಾದ ಡಾ. ಶಿ. ಚೆ. ನಂದೀಮಠರವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ಹಿರಿಯ ಸಾಹಿತಿ, ಸಂಶೋಧಕರು, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಆರ್. ಸಿ. ಹಿರೇಮಠ ತದನಂತರದಲ್ಲಿ ಡಾ.ಬಿ.ಬಿ.ಹೆಂಡಿ, ಡಾ.ಜಿ.ಎಸ್.ಕಾಪಸೆ, ಪ್ರೊ.ಬಿ.ಡಿ.ಉಪಾಸೆ, ಡಾ.ವ್ಹಿ.ಎಸ್.ಕಟಗಿಹಳ್ಳಿಮಠ, ಡಾ. ಶ್ರೀಮತಿ ಎಸ್.ಆಯ್.ಪಾವಟೆ ಡಾ.ಎಸ್.ಡಿ.ಕೆಂಗಲಗುತ್ತಿ ಶ್ರೀ ಆರ್. ನಾಗರಾಜು, ಶ್ರೀ ಎಸ್.ಟಿ.ತೋಳಮಟ್ಟಿ ಮುಂತಾದವರು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮುನ್ನಡೆಸಿಕೊಂಡು ಬಂದರು.

ಮಹಾವಿದ್ಯಾಲಯದ ಕನ್ನಡ ವಿಭಾಗವು ಅನೇಕ ವಿದಾಯಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ, ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಕಲೆ, ವಿಜ್ಞಾನ, ಸಾಹಿತ್ಯ, ಸಂಗೀತ, ಮುಂತಾದ ವಿಷಯಗಳಿಗೆ ಸಂಬಂದಿಸಿದಂತೆ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು, ವಿಶೇಷ ಉಪನ್ಯಾಸಗಳನ್ನು, ಕವಿಗೋಷ್ಠಿಗಳನ್ನು, ಸಾಹಿತಿ ಮತ್ತು ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತ ಬರಲಾಗಿದೆ. ಮತ್ತು ವಿಶೇಷ ಉಪನ್ಯಾಸಗಳನ್ನು ಸಂಗ್ರಹಿಸಿ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ.

ಕನ್ನಡ ವಿಭಾಗ ಆಯೋಜಿಸಿರುವ ಕಾರ್ಯಕ್ರಮಗಳಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಶಿವರಾಮ ಕಾರಂತ, ಡಾ.ಯು.ಆರ್.ಅನಂತಮೂರ್ತಿ, ಡಾ.ಚಂದ್ರಶೇಖರ ಕಂಬಾರ ಡಾ.ಸಾ.ಶಿ.ಮರುಳಯ್ಯ, ಡಾ.ಗಿರಡ್ಡಿ ಗೋವಿಂದರಾಜ, ಪ್ರೊ.ಟಿ.ಪಿ.ಅಶೋಕ, ವಿಮರ್ಶಕ ಪ್ರೊ.ಕಿ.ರಂ.ನಾಗರಾಜ, ಡಾ.ಬಿ.ಕೆ.ಹಿರೇಮಠ, ಪ್ರೊ.ಸಂಪಿಗೆ ತೋಂಟದಾರ್ಯ, ಡಾ.ಶ್ರೀರಾಮ ಇಟ್ಟಣ್ಣವರ, ಪ್ರೊ.ಎಂ.ನಾಗರಾಜು, ಡಾ.ಶ್ಯಾಮಸುಂದರ ಬಿದರಕುಂದಿ ಡಾ.ಸತ್ಯಾನಂದ ಪಾತ್ರೋಟ, ಮುಂತಾದವರು ವಿಶೇಷ ಉಪನ್ಯಾಸ ನೀಡಿದ್ದಾರೆ.

ಈ ಕನ್ನಡ ವಿಭಾಗವು 'ಕುವೆಂಪು ಸಾಹಿತ್ಯ ಕುರಿತಾದ ವಿಚಾರ ಸಂಕಿರಣ', ನೀನಾಸಂ ಸಹಯೋಗದಲ್ಲಿ 'ಭಾಷಣ ಮತ್ತು ಲೇಖನ ಕಲೆಯ' ಕಾರ್ಯಾಗಾರ, ನೀನಾಸಂ 'ಸಾಹಿತ್ಯ ಅರ್ಧಯಯನ ಶಿಬಿರ', ಕರ್ನಾಟಕ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ಕನ್ನಡ ಸಂಸ್ಕೃತಿ ಸಮ್ಮೇಳನ', ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ಹಳೆಗನ್ನಡ ಸಾಹಿತ್ಯ ಅಧ್ಯಯನ ಶಿಬಿರ', 'ಜೈನ ಕಾವ್ಯಗಳ ಹೋಸ ಓದು' ವಿಷಯದ ಅಡಿಯಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣಗಳನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದ್ದೇವೆ. ಈ ನೆಲೆಯಲ್ಲಿ ಭವಿಷ್ಯದ ಬರವಸೆಯ ಯುವಕ–ಯುವತಿಯರಿಗೆ ಕನ್ನಡ ನಾಡು–ನುಡಿ–ಭಾಷೆ–ಸಂಸ್ಕೃತಿ ವಾಹಕವಾಗುವ ಬಯಕೆ ನಮ್ಮದಾಗಿದೆ.

ಹೀಗೆ ಮಹಾವಿದ್ಯಾಲಯದ 'ಕನ್ನಡ ವಿಭಾಗವು' ವಿದ್ಯಾರ್ಥಿಗಳನ್ನು ಮತ್ತು ಪ್ರಾಧ್ಯಾಪಕರನ್ನು ನಿರಂತರ ಕ್ರಿಯಾಶೀಲಗೊಳಿಸಿದೆ.

## About Department:

The department of Kannada was started with the establishment of the Arts and Science in 1944 to run basic courses. Our language department spitted along with the Science College, which became independent on October 18th 1967 inaugurated by his Excellence Shri V.V.Giri President of India.

Since establishment of the department of Kannada a rich tradition has been laid down and cultivated through the earnest efforts of prominent scholars like Dr. S.C.Nandimath ( M.A.,Ph.D in Londan) former Vice Chancellor and former Registrar of Karnataka University Dharawad, Dr.R.C.Hiremath, former Vice- Chancellor of Karnataka University Dharawad, Dr.G.H Kapse, Dr. B.B.Hendi, Prof. B.D.Upase, Dr.P.K.Khandoba , Dr.B.K.Hiremath. We are proud to say that Dr. S.C .Nandimath founder principal of our college an everlasting pearl of the language department who had fluency over Kannada, English, Sanskrit and Prakrit Literature.

**Specific Objectives:**

The department of Kannada has been playing a role of sheet anchor since its inception in 1944.Its popularity never came down as it always catered to the needs of the students. Yet the department realized that a proper planning for the future is necessary to make Kannada literature interesting useful and familiar. The new generation has given a new dimension to Kannada studies. The recent developments like globalization, privatization and liberalization and the rapid growth of the information Science and technology have certainly made to redefine, re-establish and find new fields of applications. To adjust with the changing circumstances, the department has planned to bring some changes through teaching

- To germinate contemplation, scientific approach and novelty of thoughts through inspiring teachings
- Through teachings remind the glory of the culture and values of our land and language.
- By conducting workshop and seminars the department helps to develop and expose the hidden talents.
- By conducting essay & poetry writing competitions, encourage the imaginative mind and creative writing.
- Helping the faculty to sort out language difficulties.

- Through the teaching aware of them of human values and social responsibilities
- Germinate competitive spirit through cultural competitions.
- Through the teaching bring a healthy co-ordination between art, science and culture.